ಪಿ . ಡಬ್ಲ್ಯೂಃ 02.

ದಿನಾಂಕಃ 14-02-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 1, 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಸಿ ಡಿ ವಕೀಲರಿಂದಃ

ನನ್ನ ಯಜಮಾನರ ರಾಮಶೆಟ್ಟಿ ಎಂದರೆ ಸರಿ. ನಿಮ್ಮ ಯಜಮಾನರಿಗೆ ನಾನು ಹಿರಿಯ ಹೆಂಡತಿ, ಮತ್ತು ಸುಬ್ಬಮ್ಮ 2 ನೇ ಹೆಂಡತಿ ಎಂದರೆ ಸರಿ. ಶಶಿಕಲಾ ನನಗೆ ಒಬ್ಬಳೇ ಮಗಳು. ಸುಬ್ಬಮ್ಮನವರಿಗೆ ಐದು ಜನ ಮಕ್ಕಳು ಎಂದರೆ ಸರಿ. ನನ್ನ ಯಜಮಾನರು ತಮ್ಮ ಜೀವಿತ ಕಾಲದಲ್ಲಿ ಆಸ್ತಿಗಳನ್ನು ಇಟ್ಟು ಪೌತಿಯಾಗಿದ್ದರು ಎಂದರೆ ಸರಿ, ನನ್ನ ಯಜಮಾನರು ತೀರಿಕೊಂಡ ನಂತರ ನಾನು , ನನ್ನ ಮಗಳು , ಸುಬ್ಬಮ್ಮ ಮತುತ ಅವರ ಮಕ್ಕಳು ಅವರ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಮ್ಮ ಪಾಲಿಗೆ ಬಂದಂತ ಆಸ್ತಿಗಳನ್ನು ನಿಮ್ಮ ಮಗಳಿಗೆ ಬಿಟ್ಟು ಕೊಟ್ಟಿದ್ದೀರಿ ಎಂದರೆ ಸರಿಯಲ್ಲಾ. ನನ್ನ ಮಗಳಿಗೆ ಆಸ್ತಿಯನ್ನು ಕೊಟ್ಟಿದ್ದೇನೆ . ನಾನು, ನನ್ನ ಮಗಳು ನಮ್ಮ ಭಾಗಕ್ಕೆ ಬಂದಂತಹ ಮನೆಯಲ್ಲಿ ವಾಸವಾಗಿದ್ದೇವೆ

ಎಂದರೆ ಸರಿ. ನಿಮ್ಮ ಮಗಳು ಹುಟ್ಟಿದಾಗಿನಿಂದಲೂ ನಿಮ್ಮ ಜೊತೆಗೆ ವಾಸವಾಗಿದ್ದಾಳೆ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಅವಳು ಗರ್ಭಿಣಿಯಾದಾಗ ನಮ್ಮ ಮನೆಯಲ್ಲಿ ಇರುತ್ತಾಳೆ ಎಂದಿದ್ದಾರೆ. ನಿಮ್ಮ ಯಜಮಾನರಿಗೂ ಶಿವಣ್ಣನವರಿಗೂ ಹಳೆ ಸಂಬಂಧ ಎಂದರೆ ಸರಿ. ಶಿವಣ್ಣನ ಹೆಂಡತಿ ಶಿವಮ್ಮ ನನಗೆ ಗೊತ್ತಿಲ್ಲಾ. ಅವರಿಗೆ ಇಬ್ಬರು ಮಕ್ಕಳು ಇರುವ ಬಗ್ಗೆ ನನಗೆ ಗೊತ್ತಿಲ್ಲಾ. ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ ಪ್ರಮಾಣ ಪತ್ರಿಕೆಯಲ್ಲಿ ಶಿವಣ್ಣನ ಹೆಂಡತಿ ಶಿವಮ್ಮನಿಗೆ ಸುನೀತಾ ಮತ್ತು ಅನಿತಾ ಎಂಬ ಇಬ್ಬರು ಮಕ್ಕಳು ಎಂದು ಹೇಳಿ ಬರೆಸಿದ್ದೇನೆ.

ನನ್ನ ಮಗಳಿಗೆ ಶಿವಣ್ಣನೊಂದಿಗೆ ಕೆ ಆರ್ ನಗರದ ಅರ್ಕೇಶ್ವರ ದೇವಸ್ಥಾನದಲ್ಲಿ ಮದುವೆ ಆಗಿದೆ. ಸದರಿ ಮದುವೆಯನ್ನು ನೋಡಿದವರು ಯಾರಾದರೂ ಇದ್ದಾರಾ ಎಂದರೆ ಸಾಕ್ಷಿಯು ನೋಡಿದವರೆಲ್ಲಾ ಸಾಕ್ಷಿ ಹೇಳಲು ಬರುತ್ತಾರಾ ಎಂದಿದ್ದಾರೆ. ನಿಮ್ಮ ಮಗಳಿಗೂ ಉಳಿದ ಪ್ರತಿವಾದಿಗಳಿಗೂ ಯಾವುದೇ ರೀತಿಯಾದ ಸಂಬಂಧ ಇಲ್ಲಾ ಎಂದರೆ ಸರಿಯಲ್ಲಾ. ಈ ದಾವೆಯನ್ನು ಸ.ನಂ: 105 ಕ್ಕೆ ಸಂಬಂಧಿಸಿದಂತೆ ದಾವೆ ಹೂಡಿದ್ದಾರೆ. ಸ.ನಂ: 105 ಯಾರು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ವಿಷಕಂಠ, ರಾಜಶೆಟ್ಟಿ ಮತ್ಯಾರ ಹೆಸರು ಇದೆ ಎಂದು ನನಗೆ ಗೊತ್ತಿಲ್ಲಾ. ಸಾಕ್ಷಿ ಮುಂದುವರೆದು ರಾಜಶೆಟ್ಟಿಯವರ ಹೆಸರಿನಲ್ಲಿ ಇದೆ ಎಂದಿದ್ದಾರೆ. ರಾಜಶೆಟ್ಟಿಯವರ ಹೆಸರಿನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲಾ. ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಎಷ್ಟು ಎಕರೆ ಬರೆಸಿದ್ದೇನೆ ಎಂದು ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳು ಹೇಗೆ ಬಂತು ಎಂದರೆ ಸಾಕ್ಷಿಯು ಪಿತ್ರಾರ್ಜಿತ ಸ್ವತ್ತು ಎಂದಿದ್ದಾರೆ. ಸದರಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲಾ. ಪ್ರತಿವಾದಿಗಳ ಹೆಸರಿನಲ್ಲಿ ಈಗ 2 ವರೆ ಎಕರೆ ಜಮೀನು ಇದೆ. ಯಾರು ಯಾರು ಹೆಸರಿನಲ್ಲಿ ಎಷ್ಟು ಎಷ್ಟು ಇದೆ ಎಂದರೆ ಸಾಕ್ಷಿಯು ಸಮನಾಗಿ ಇದೆ ಎಂದಿದ್ದಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಇದೆ. 2 ನೇ ಪ್ರತಿವಾದಿಯ ಹೆಸರಿನಲ್ಲಿಯೂ ಸಹ ಸ್ವಲ್ಪ ಜಮೀನು ಇದೆ. 1 ನೇ ಪ್ರತಿವಾದಿಯ ಹೆಸರನಲ್ಲಿರುವ ಜಮೀನನ್ನು ಅವರೇ ಅನುಭವಿಸುತ್ತಿದ್ದಾರೆಂದರೆ ಸರಿ, ಒಟ್ಟು ಕುಟುಂಬದ ಸ್ವಾಧೀನದಲ್ಲಿ ಇರದೇ ಅವರವರ ಹಿಸ್ಸೆಯನ್ನು ಅವರವರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ನಿಮ್ಮ ಮಗಳು ಶಿವಣ್ಣನವರನ್ನು ಮದುವೆಯಾಗಿಲ್ಲ. ಯಾವುದೇ ರೀತಿಯಾದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲಾ. ಇವರು ಹಳೇ ಸಂಬಂಧವನ್ನು ದುರುಪಯೋಗಪಡಿಸಿಕೊಂಡು, 3 ನೇ ಪ್ರತಿವಾದಿಯನ್ನು ಮದುವೆಯಾಗಿದ್ದೇನೆಂದು ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ. ನಿಮ್ಮ ಮಗಳು ಇಲ್ಲಿಯವರೆಗೂ ನಿಮ್ಮ ಮನೆಯಲ್ಲಿಯೇ ಇದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲಾ.

ಮರು ವಿಚಾರಣೆ ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.